# ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಬಸವಣ್ಣನವರು: ಒಂದು ಅವಲೋಕನ

ಮಹಾದೇವಪ್ಪ ಕೊಪ್ಪದ[1] & ಎಸ್.ಎಂ.ಗಂಗಾಧರಯ್ಯ[2]

[1]ಸಂಶೋಧನಾ ವಿದ್ಯಾರ್ಥಿ ಹಾಗೂ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಬೈಲಹೊಂಗಲ, ಬೆಳಗಾವಿ.

[2]ಪ್ರಾಧ್ಯಾಪಕರು ಹಾಗೂ ನಿರ್ದೇಶಕರು, ಫ. ಗು. ಹಳಕಟ್ಟಿ ಸ್ನಾತಕೋತ್ತರ ಅಧ್ಯಯನ ಕೇಂದ್ರ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

DOI: https://doi.org/10.5281/zenodo.17257631

## ABSTRACT:

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಸವಣ್ಣನವರು ಅನನ್ಯ ವ್ಯಕ್ತಿತ್ವವಾಗಿ ಹೊರಹೊಮ್ಮಿದ್ದಾರೆ. ವಚನ ಸಾಹಿತ್ಯದ ಮೂಲಕ ಸಮಾಜಮುಖಿ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಯನ್ನು ಸೃಷ್ಟಿಸಿದ ಬಸವಣ್ಣನವರ ಜೀವನ ಮತ್ತು ಸಾಧನೆಗಳು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅನಾವರಣಗೊಂಡಿವೆ. ವಿಶೇಷವಾಗಿ ಕಾದಂಬರಿ ಪ್ರಕಾರದಲ್ಲಿ ಬಸವಣ್ಣನವರ ಬದುಕು, ತತ್ವ, ಆಧ್ಯಾತ್ಮಿಕ ಸಾಧನೆಗಳು, ಸಾಮಾಜಿಕ ಸುಧಾರಣಾ ಚಳವಳಿಗಳು ಹಾಗೂ ಅನುಭವ ಮಂಟಪದ ಚಟುವಟಿಕೆಗಳನ್ನು ಆಧಾರವಾಗಿಸಿಕೊಂಡು ಹಲವಾರು ಕೃತಿಕಾರರು ಕಾದಂಬರಿಗಳನ್ನು ರಚಿಸಿದ್ದಾರೆ. ದಿ.ಬಿ.ಪುಟ್ಟಸ್ವಾಮಯ್ಯ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಜಿ.ಹೆಚ್.ಹನ್ನೆರಡುಮಠ, ಲಕ್ಕಪ್ಪ ಅ. ಶಿರಹಟ್ಟಿ, ಶಾಂತಾದೇವಿ ಮಾಳವಾಡ, ಮಂಗಾಪುರಮಠ ಚಂದ್ರಶೇಖರಶಾಸ್ತ್ರಿ ಮುಂತಾದ ಕಾದಂಬರಿಕಾರರು ಬಸವಣ್ಣನವರ ಚರಿತ್ರೆಯನ್ನು ವೈವಿಧ್ಯಮಯ ದೃಷ್ಟಿಕೋನಗಳಿಂದ ಕಟ್ಟಿಕೊಟ್ಟಿದ್ದಾರೆ. ಈ ಕಾದಂಬರಿಗಳಲ್ಲಿ ಬಸವಣ್ಣನವರ ರಾಜಕೀಯ, ಧಾರ್ಮಿಕ, ಸಾಮಾಜಿಕ, ತತ್ವಜ್ಞಾನಿ ಹಾಗೂ ಪವಾಡಪುರುಷ ಎಂಬ ಅಂಶಗಳು ಪ್ರಬಲವಾಗಿ ವ್ಯಕ್ತವಾಗಿವೆ. ಹೀಗಾಗಿ, ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಬಸವಣ್ಣನವರ ವ್ಯಕ್ತಿತ್ವವು ಸಮಗ್ರವಾಗಿ ಪ್ರತಿಬಿಂಬಿತವಾಗಿದೆ ಎಂಬುದನ್ನು ಈ ಅವಲೋಕನ ಸ್ಪಷ್ಟಪಡಿಸುತ್ತದೆ.

## KEYWORDS:

ಬಸವಣ್ಣ, ವಚನ ಸಾಹಿತ್ಯ, ಕನ್ನಡ ಕಾದಂಬರಿ, ಅನುಭವ ಮಂಟಪ, ಸಾಮಾಜಿಕ ಸುಧಾರಣೆ, ಧಾರ್ಮಿಕ ಕ್ರಾಂತಿ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ತನ್ನದೆಯಾದ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವ ಕನ್ನಡ ಸಾಹಿತ್ಯವನ್ನು ಅಧ್ಯಯನದ ಅನುಕೂಲಕ್ಕಾಗಿ ನಮ್ಮ ಕವಿ ಚರಿತ್ರೆಕಾರರು ಹಲವು ದೃಷ್ಟಿಕೋನಗಳನ್ನು ಆಧಾರವಾಗಿಟ್ಟುಕೊಂಡು ವಿಭಾಗ ಕ್ರಮ ಮಾಡಿದ್ದಾರೆ. ಅವುಗಳಲ್ಲಿ ಕವಿಗಳು ಬಾಳಿ ಬದುಕಿದ ಕಾಲಕ್ಕೆ ಅನುಗುಣವಾಗಿ ವಿವಿಧ ಕಾಲಘಟ್ಟಗಳಲ್ಲಿ ವಿಭಾಗ ಮಾಡಿದ್ದಾರೆ. ಪ್ರಾಚೀನ, ಮಧ್ಯಕಾಲೀನ, ಆಧುನಿಕ, ಆಧುನಿಕೋತ್ತರ ಎಂಬ ವಿಭಾಗ ಕ್ರಮಗಳನ್ನು ಮಾಡಿದ್ದು, ಈ ವಿಭಾಗ ಕ್ರಮದಿಂದ ಆಯಾ ಕಾಲಘಟ್ಟದ ಸಂಸ್ಕೃತಿ, ಭಾಷೆ, ಸಾಹಿತ್ಯ ಮುಂತಾದ ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿದೆ. ಈ ಮೇಲಿನ ಕಾಲಘಟ್ಟಗಳಲ್ಲಿ ಕನ್ನಡ ಸಾಹಿತ್ಯ ಸಮೃದ್ಧವಾಗಿ ರಚನೆಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಮಧ್ಯಕಾಲೀನ ಸಾಹಿತ್ಯವು ಅತ್ಯಂತ ಪ್ರಮುಖವಾದ ಕಾಲಘಟ್ಟವಾಗಿದೆ. ಬಸವಪೂರ್ವ ಯುಗ, ಬಸವಯುಗ, ಬಸವೋತ್ತರಯುಗವೆಂಬ ವಿಭಾಗಗಳಲ್ಲಿ ಈ ಕಾಲದ ಸಾಹಿತ್ಯವು ವಿಸ್ತಾರವಾಗಿ ಬೆಳೆದಿದೆ. ಈ ಕಾಲಘಟ್ಟವು ಹನ್ನೊಂದು, ಹನ್ನೆರಡನೆಯ ಶತಮಾನದ ಶಿವಶರಣರು ಬಾಳಿ ಬದುಕಿದ ಕಾಲ. ಈ ಸಂದರ್ಭದಲ್ಲಿ ವಚನ ಸಾಹಿತ್ಯವು ಹಿಂದಿನ ಮಾರ್ಗ ಶೈಲಿಯಿಂದ ಪಾರಾಗಿ ಜನಭಾಷೆಯಲ್ಲಿ ರಚನೆಗೊಂಡಿತು. ಈ ಜನ ಭಾಷೆಯ ಸಾಹಿತ್ಯದಿಂದ ಪ್ರೇರಣೆ ಪಡೆದ ಆ ಕಾಲದ ಪ್ರಮುಖ ವೀರಶೈವ ಕವಿಯಾದ ಹರಿಹರ ಮತ್ತು ರಾಘವಾಂಕ ಹಾಗೂ ಅವರ ನಂತರದ ಕವಿಗಳು ಸಾಮಾನ್ಯರಿಗೂ ಅರ್ಥವಾಗುವಂತಹ ಸರಳವಾದ ರಗಳೆ, ಷಟ್ಪದಿ, ಶತಕ, ಮುಂತಾದ ಪ್ರಕಾರಗಳಲ್ಲಿ ಕಾವ್ಯಗಳನ್ನು ರಚಿಸಿದರು. ಈ ಹಿನ್ನಲೆಯಲ್ಲಿ ವಚನಕಾರರ ಪ್ರಭಾವದಿಂದ ಪ್ರೇರಿತಗೊಂಡ ಅಂದಿನ ವೀರಶೈವ ಕವಿಗಳು ಹಲವು ಪುರಾಣ, ಕಾವ್ಯ, ಚರಿತ್ರೆಗಳನ್ನು ರಚನೆ ಮಾಡಿದರು.

ಮಧ್ಯಕಾಲೀನ ಕನ್ನಡ ಕವಿಗಳು ತಮಗೆ ಇಷ್ಟವಾದ ಶರಣನ ಕಥೆಯನ್ನು ಕಾವ್ಯ ವಸ್ತುವನ್ನಾಗಿ ತೆಗೆದುಕೊಂಡು ಕಾವ್ಯಗಳನ್ನು ರಚಿಸಿದರು. ಹೀಗೆ ರಚನೆಗೊಂಡ ವೀರಶೈವ ಸಾಹಿತ್ಯವು ತುಂಬಾ ಹುಲುಸಾಗಿ ಬೆಳೆಯಿತು. ಕನ್ನಡ ವೀರಶೈವ ಸಾಹಿತ್ಯದ ಕವಿಗಳೆಲ್ಲರಿಗೂ ಅತ್ಯಂತ ಪ್ರಿಯವಾದ ವ್ಯಕ್ತಿ ಬಸವಣ್ಣ. ಸಾಮಾನ್ಯವಾಗಿ ಎಲ್ಲ ಕನ್ನಡ ವೀರಶೈವ ಕವಿಗಳು ಯಾವುದೇ ಶರಣನ ಕುರಿತು ಕಾವ್ಯ ರಚಿಸಿದ್ದರೂ, ಅವರ ಕಾವ್ಯದ ಯಾವುದಾದರೂ ಒಂದು ಭಾಗದಲ್ಲಿ ಬಸವಣ್ಣನ ಪ್ರವೇಶ ಇದ್ದೇ ಇರುತ್ತಿತ್ತು. ಕಾರಣ ಬಹುತೇಕ ಶರಣರ ಬದುಕಿಗೂ ಬಸವಣ್ಣ ಮಾರ್ಗದರ್ಶಿಯಾಗಿದ್ದರು. ಬಸವಣ್ಣನವರ ಭಕ್ತಿಯ ಪ್ರಭಾವಲಯದಲ್ಲಿಯೇ ಅಂದಿನ ಶರಣ ಸಮೂಹ ಬದುಕುತ್ತಿತ್ತು. ಈ ಹಿನ್ನಲೆಯಲ್ಲಿ ಎಲ್ಲರೂ ಬಸವಣ್ಣನವರ ತತ್ವಾದರ್ಶಗಳನ್ನು ನಂಬಿದವರು ಮತ್ತು ಅವನಂತೆಯೇ ಬದುಕಿದ್ದರೂ ಕೂಡ. ಹೀಗಾಗಿ ಬಸವಣ್ಣನವರು ವೀರಶೈವ ಸಾಹಿತ್ಯದ ಮುಖ್ಯ ವಸ್ತುವಾಗಿ ಪರಿಣಾಮ ಬೀರಿದ್ದರು.

ವಿದ್ವಾಂಸರು ತಿಳಿಸುವಂತೆ ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರ ಕುರಿತು ರಚನೆಯಾದಷ್ಟು ಕೃತಿಗಳು ಬೇರೆ ಯಾವ ವ್ಯಕ್ತಿಯ ಬಗ್ಗೆಯೂ ರಚನೆಗೊಂಡಿಲ್ಲ. ಕಾವ್ಯ, ಪುರಾಣ, ಕಥೆ, ಕಾದಂಬರಿ, ನಾಟಕ, ಮಹಾಕಾವ್ಯ, ವಿಮರ್ಶೆ, ಸಂಶೋಧನೆ, ವೈಚಾರಿಕ, ಕವನ ಮುಂತಾದ ಎಲ್ಲಾ ಪ್ರಕಾರಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಬಸವಣ್ಣನವರ ಜೀವನ ಅನಾವರಣಗೊಂಡಿದೆ. ಒಬ್ಬ ವಿಮರ್ಶಕರು ಹೇಳುವಂತೆ "ಬರೆದಷ್ಟು ಬರೆಸಿಕೊಳ್ಳುವ, ಓದಿದಷ್ಟು ಓದಿಸಿಕೊಳ್ಳುವ, ನೋಡಿದಷ್ಟು ಕಾಣುವ, ಚಿಂತನೆ ಮಾಡಿದಷ್ಟು ಚಿಂತನೆಗೆ ಒಳಗಾಗುವವ, 12ನೇ ಶತಮಾನದ ಬಸವಣ್ಣ ಈ ಶತಮಾನದ ಉದ್ದಕ್ಕೂ ಒಂದು ಚಿಂತನಶೀಲ ಪರಂಪರೆಯನ್ನು ಸೃಷ್ಟಿಸಿದ್ದಾನೆ"[1] ಎಂದಿದ್ದಾರೆ. ನಡುಗನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಬಸವಣ್ಣನವರ ಕುರಿತು ಪ್ರಥಮ ಬಾರಿಗೆ ಕಾವ್ಯ ರಚಿಸಿದ ಕೀರ್ತಿ ಕವಿ ಹರಿಹರನಿಗೆ ಸಲ್ಲುತ್ತದೆ. ತದನಂತರ ಭೀಮಕವಿ, ಸಿಂಗಿರಾಜ, ಷಡಕ್ಷರದೇವ, ಕವಿ ಕಾಡ, ಗರಣಿಯ ಬಸವಲಿಂಗ, ಅದೃಶ್ಯಕವಿ, ಶಂಕರಕವಿ, ಉತ್ತರದೇಶದ ಬಸವಲಿಂಗ ಕವಿ, ಚನ್ನಪ್ಪಕವಿ ಇನ್ನೂ ಮುಂತಾದ ಕವಿಗಳು ತಮ್ಮ ಕಾವ್ಯಗಳಲ್ಲಿ ಬಸವಣ್ಣನವರ ಭವ್ಯ ಜೀವನ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಮುಂದುವರೆದು ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ಕವಿಗಳಿಂದ ಕಾವ್ಯಗಳು ರಚನೆಗೊಳ್ಳುತ್ತಾ ಬಂದಿದ್ದು, ಇಪ್ಪತ್ತು ಹಾಗೂ ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಬಸವಣ್ಣನವರ ಕುರಿತು ಅಪಾರವಾದ ಸಾಹಿತ್ಯ ರಾಶಿ ರಚನೆಯಾಗಿರುವುದನ್ನು ನೋಡಬಹುದಾಗಿದೆ.

ಈ ಲೇಖನದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಜನಪ್ರಿಯ ಸಾಹಿತ್ಯ ಪ್ರಕಾರವಾಗಿರುವ ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ಹಲವು ಲೇಖಕರು ಬಸವಣ್ಣನವರ ವೈವಿಧ್ಯಮಯ ಬದುಕನ್ನು, ಜನಪರ ಕಾರ್ಯಗಳನ್ನು, ಆಧ್ಯಾತ್ಮಿಕ ಸಾಧನೆ ಹಾಗೂ ಸಿದ್ಧಿಗಳನ್ನು ಬಳಸಿಕೊಂಡು ಬೃಹತ್ ಕಾದಂಬರಿಗಳನ್ನು ರಚಿಸಿದ್ದಾರೆ. ಬಸವಣ್ಣನವರ ಕುರಿತು ಕಾದಂಬರಿಗಳನ್ನು ರಚಿಸಿದ ಕೃತಿಕಾರರು ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಸಹ ಅವರು ರಚಿಸಿದ ಕಾದಂಬರಿಗಳು ಗಾತ್ರದಲ್ಲಿ ಬೃಹತ್ ಆಗಿದ್ದು, ಜನಪ್ರಿಯತೆಯನ್ನು ಗಳಿಸಿವೆ. ಈ ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಗುಮಾಡಿ ಅವಲೋಕನ ಮಾಡುವ ಸೀಮಿತ ಉದ್ದೇಶವನ್ನು ಹೊಂದಿದ್ದೇನೆ.

ಬಸವಣ್ಣನವರ ಜೀವನ ಸಾಧನೆಗಳನ್ನು ವಸ್ತುವಾಗಿರಿಸಿಕೊಂಡು ಪ್ರಪ್ರಥಮವಾಗಿ ಕಾದಂಬರಿ ರಚನೆಗೆ ಕೈ ಹಾಕಿದವರೆಂದರೆ ದಿ.ಬಿ.ಪುಟ್ಟಸ್ವಾಮಯ್ಯನವರು ಅವರು ಉದಯರವಿ, ರಾಜ್ಯಪಾಲ, ಕಲ್ಯಾಣೇಶ್ವರ, ನಾಗಬಂಧ, ಮುಗಿಯದ ಕನಸು, ಕ್ರಾಂತಿ ಕಲ್ಯಾಣ ಎಂಬ ಆರು ಸಂಪುಟಗಳಲ್ಲಿ ಸುಮಾರು 2100 ಪುಟಗಳಲ್ಲಿ ಬಸವಣ್ಣನವರ ಜೀವನದ ವಿವಿಧ ಮುಖಗಳ ಹಾಗೂ ಬದುಕಿನ ಹರವನ್ನು ತೋರಿಸಲು ಪ್ರಯತ್ನಿಸಿದ್ದಾರೆ.

ಬಸವಣ್ಣನವರ ಚರಿತ್ರೆಯನ್ನು ಕುರಿತು ಬಿ. ಪುಟ್ಟಸ್ವಾಮಯ್ಯನವರು ರಚಿಸಿದ ಮೊದಲನೆಯ ಕಾದಂಬರಿ 'ಉದಯರವಿ' ಕಾದಂಬರಿಯು 1959ರಲ್ಲಿ ಬೆಂಗಳೂರಿನ ಶಾರದಾ ಪ್ರಕಟನಾಲಯದಿಂದ ಪ್ರಥಮ ಬಾರಿಗೆ ಮುದ್ರಣಗೊಂಡಿದ್ದು. ಬಸವಣ್ಣನವರ ಜನನ, ಬಾಲ್ಯ, ವಿದ್ಯಾಭ್ಯಾಸ, ಗುರುಕುಲ ವಾಸ, ಇವುಗಳು ಯಥಾವತ್ತಾಗಿ ಸಾಗಿದ ಮೇಲೆ ಪ್ರಾಪ್ತವಯಸ್ಕರಾದ ಬಸವಣ್ಣನವರಿಗೆ ಗಂಗಾಂಬಿಕೆಯೊಂದಿಗೆ ವಿವಾಹವಾಗುವುದು, ಆ ಮೇಲೆ ಅವರ ಕಲ್ಯಾಣಕ್ಕೆ ಪ್ರಯಾಣಮಾಡಿ, ಬಿಜ್ಜಳನಲ್ಲಿ ಕರಣಿಕವೃತ್ತಿಯನ್ನು ಕೈಗೊಳ್ಳುವರು. ನಂತರ ನಿಧಿ ಶೋಧನೆಯ ಘಟನೆ ಬಸವಣ್ಣನವರಿಗೆ ಅಪಾರ ಗೌರವವನ್ನು ತಂದುಕೊಟ್ಟಿತು. ನಂತರ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿ ನೇಮಕ, ಇತ್ಯಾದಿ ವಿಷಯಗಳು ಅಡಕವಾಗಿವೆ.

ಬಸವಣ್ಣನವರ ಚರಿತ್ರೆಯನ್ನು ಕುರಿತು ಬಿ. ಪುಟ್ಟಸ್ವಾಮಯ್ಯನವರು ರಚಿಸಿದ ಎರಡನೆಯ ಕಾದಂಬರಿ 'ರಾಜ್ಯಪಾಲ' ಕಾದಂಬರಿಯು 1962ರಲ್ಲಿ ಬೆಂಗಳೂರಿನ ಶಾರದಾ ಪ್ರಕಟನಾಲಯದಿಂದ ಪ್ರಥಮ ಬಾರಿಗೆ ಮುದ್ರಣಗೊಂಡಿದೆ. ಇದರಲ್ಲಿ ತೈಲಪ, ಬಿಜ್ಜಳರ ನಡುವೆ ನಡೆಯಲಿದ್ದ ಅಂತರ್ ಯುದ್ಧವನ್ನು ನಿಲ್ಲಿಸಲು ಬಸವಣ್ಣನವರು ನಡೆಸಿದ ಸಂಧಾನ, ಬನವಾಸಿಯ ರಾಜ ಪ್ರತಿನಿಧಿಯಾಗಿ ನೇಮಕ, ರಾಜ್ಯಾಪಹಾರವೇ ಬಿಜ್ಜಳನ ಉದ್ದೇಶವೆಂದು ತಿಳಿದಾಗ ಬಸವಣ್ಣನವರ ಪ್ರತಿಭಟನೆ ಮತ್ತು ಅಧಿಕಾರ ತ್ಯಾಗ ಮೊದಲಾದ ವಿಷಯಗಳ ಕುರಿತು ವಿವರಿಸಲಾಗಿದೆ.

ಬಸವಣ್ಣನವರ ಚರಿತ್ರೆಯನ್ನು ಕುರಿತು ಬಿ. ಪುಟ್ಟಸ್ವಾಮಯ್ಯನವರು ರಚಿಸಿದ ಮೂರನೆಯ ಕಾದಂಬರಿ 'ಕಲ್ಯಾಣೇಶ್ವರ' ಕಾದಂಬರಿಯು 1962ರಲ್ಲಿ ಬೆಂಗಳೂರಿನ ಶಾರದಾ ಪ್ರಕಟನಾಲಯದಿಂದ ಪ್ರಥಮ ಬಾರಿಗೆ ಮುದ್ರಣಗೊಂಡಿದೆ. ಬಸವಣ್ಣನವರು ಸ್ಥಾಪಿಸಿದ ಅನುಭವಮಂಟಪದ ಅಧ್ಯಕ್ಷ ಸ್ಥಾನಕ್ಕೆ ಅಲ್ಲಮಪ್ರಭುದೇವರ ಆಯ್ಕೆ, ಶೂನ್ಯ ಸಿಂಹಾಸನಾರೋಹಣ, ಬಸವಣ್ಣನವರು ಆಚರಣೆಗೆ ತಂದ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಗಳು, ಇವುಗಳ ಬಗೆಗೆ ಬಸವಣ್ಣನವರ ಪಾತ್ರದೊಂದಿಗೆ ಮಾರಸಿಂಹ, ಶೀಲವಂತ, ಹರಳಯ್ಯ, ಗುಣಗಳ್ಳ ಯೋಗಿ, ಸಿದ್ಧರಾಮಣ್ಣ, ಮಹಾದೇವಿ ಮೊದಲಾದ ಪಾತ್ರಗಳು ಕಾಣಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಬಸವೇಶ್ವರರು ಪ್ರಾರಂಭಿಸಿದ ಧಾರ್ಮಿಕ ಕ್ರಾಂತಿ ಈ ಪಾತ್ರಗಳ ಮೇಲೆ ಬೀರಿದ ಪ್ರಭಾವವನ್ನು ವೈಯಕ್ತಿಕವಾಗಿಯೂ, ಸಮಷ್ಟಿಯಾಗಿಯೂ ಚಿತ್ರಿಸಲು ಈ ಕಾದಂಬರಿಯಲ್ಲಿ ಪ್ರಯತ್ನಿಸಿದ್ದಾರೆ.

ಬಸವಣ್ಣನವರ ಚರಿತ್ರೆಯನ್ನು ಕುರಿತು ಬಿ.ಪುಟ್ಟಸ್ವಾಮಯ್ಯನವರು ರಚಿಸಿದ ನಾಲ್ಕನೆಯ ಕಾದಂಬರಿ 'ನಾಗಬಂಧ' ಕಾದಂಬರಿಯು 1962ರಲ್ಲಿ ಬೆಂಗಳೂರಿನ ಶಾರದಾ ಪ್ರಕಟನಾಲಯದಿಂದ ಪ್ರಥಮ ಬಾರಿಗೆ ಮುದ್ರಣಗೊಂಡಿದೆ. ಇದರಲ್ಲಿ

“ಬಸವಣ್ಣನವರು ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ ಕನ್ನಡ ನಾಡಿನಲ್ಲಿ ಅಭೂತಪೂರ್ವವಾದ ಧರ್ಮಕ್ರಾಂತಿಯ ಕಾರಣರಾದರು... ಅನಂತರ ಕೆಲವು ವರುಷಗಳಲ್ಲಿಯೇ ಇನ್ನೊಂದು ಬೇರೆ ಸ್ವರೂಪದ ಕ್ರಾಂತಿಯುಂಟಾಯಿತು. ಮೊದಲನೆಯ ಕ್ರಾಂತಿ ರಚನಾತ್ಮಕ ಮತ್ತು ಸಾಂಸ್ಕೃತಿಕವಾದರೆ ಎರಡನೆಯದು ವಿನಾಶಕ ಮತ್ತು ರಾಜಕೀಯವಾಗಿತ್ತು. ಈ ಎರಡನೆಯ ಕ್ರಾಂತಿಯ ಪರಿಣಾಮವಾಗಿ ಕಲ್ಯಾಣದಲ್ಲಿ ನೆರೆದಿದ್ದ ಶರಣರೆಲ್ಲ ತಮ್ಮ ಕಟ್ಟಕಡೆಯ ನಿಲುವನ್ನು ಕಾಣಲು ಚದುರಿಹೋಗಬೇಕಾಯಿತು. ಈ ಎರಡನೆಯ ಕ್ರಾಂತಿಯ ನಿಜಸ್ವರೂಪ, ಅದಕ್ಕೆ ಹಿನ್ನಲೆಯಾದ ರಾಜಕೀಯ, ಸಾಮಾಜಿಕ, ಮತ್ತು ಧಾರ್ಮಿಕ ಪರಿಸ್ಥಿತಿ, ಆಗಿನ ಕಾಲದ ಜನರ ಮುಖ್ಯವಾಗಿ ಶ್ರೀಮಂತರ ಸಾಮಂತರ ವಿಲಾಸಮಯ ವೈಭವ ಜೀವನ, ತ್ಯಾಗ ಮತ್ತು ವಿರಕ್ತಿಭಾವಪ್ರಧಾನವಾದ ಶೈವಶರಣಧರ್ಮದಿಂದ ಆದರ ಮೇಲೆ ಒದಗಿದ ಪ್ರತಿಘಾತ ಇವುಗಳನ್ನು ಕುರಿತು ನಿರೂಪಿಸಲು ಪ್ರಯತ್ನಿಸಿದ್ದೇನೆ”.[2] ಎಂದಿದ್ದಾರೆ.

ಬಸವಣ್ಣನವರ ಚರಿತ್ರೆಯನ್ನು ಕುರಿತು ಬಿ. ಪುಟ್ಟಸ್ವಾಮಯ್ಯನವರು ರಚಿಸಿದ ಐದನೆಯ ಕಾದಂಬರಿ 'ಮುಗಿಯದ ಕನಸು ' ಕಾದಂಬರಿಯು 1962ರಲ್ಲಿ ಬೆಂಗಳೂರಿನ ಶಾರದಾ ಪ್ರಕಟನಾಲಯದಿಂದ ಪ್ರಥಮ ಬಾರಿಗೆ ಮುದ್ರಣಗೊಂಡಿದೆ. ಇದರಲ್ಲಿ ಸರ್ಪದಷ್ಟನಾಗಿ ಕಲ್ಯಾಣಕ್ಕೆ ಬಂದ ಶೀಲವಂತನನ್ನು ಮರವೆಯಿಂದ ಎಚ್ಚರಿಸಲು ಮಧುವರಸರ ಮಗಳು ಲಾವಣ್ಯವತಿ ಅನುಸರಿಸುವ ವಿಚಿತ್ರ ಚಿಕಿತ್ಸಾ ವಿಧಾನ, ಲಾವಣ್ಯವತಿ ಹಾಗೂ ಶೀಲವಂತರ ವಿವಾಹ, ನಾರಾಯಣ ಕ್ರಮಿತನಿಂದ, ಆ ವಿವಾಹಕ್ಕೆ ಪ್ರತಿಭಟನೆ, ಬಿಜ್ಜಳನಿಂದ ವರ್ಣ ಸಂಕರವನ್ನು ಕುರಿತು ಮನವಿಯ ವಿಚಾರಣೆ, ಬಸವೇಶನ ದೇಶನಿರ್ವಾಸನ, ಮೊದಲಾದ ವಿವರಗಳನ್ನು ತಿಳಿಸಿದ್ದಾರೆ.

ಬಸವಣ್ಣನವರ ಚರಿತ್ರೆಯನ್ನು ಕುರಿತು ಬಿ. ಪುಟ್ಟಸ್ವಾಮಯ್ಯನವರು ರಚಿಸಿದ ಆರನೆಯ ಕಾದಂಬರಿ 'ಕ್ರಾಂತಿ ಕಲ್ಯಾಣ' ಕಾದಂಬರಿಯು 1963ರಲ್ಲಿ ಬೆಂಗಳೂರಿನ ಶಾರದಾ ಪ್ರಕಟನಾಲಯದಿಂದ ಪ್ರಥಮ ಬಾರಿಗೆ ಮುದ್ರಣಗೊಂಡಿದೆ. ಇದರಲ್ಲಿ “ಬಸವೇಶ್ವರರು ಕಲ್ಯಾಣವನ್ನು ಬಿಟ್ಟಿದ್ದು, ಚೆನ್ನಬಸವಣ್ಣ ಬಿಜ್ಜಳನ ಮಂತ್ರಿಯಾದುದು, ಮಧುವರಸಹರಳಯ್ಯಗಳ ಬಂಧನ, ಮತ್ತು ನ್ಯಾಯ ವಿಚಾರಣೆ, ಮಂಚಣ್ಣನ ಆತ್ಮಹತ್ಯೆ, ಮಧುವಯ್ಯಹರಳಯ್ಯಶೀಲವಂತಇವರಿಗೆ ಮರಣದಂಡನೆ, ಶರಣರ ಶೂಲಾರೋಹಣ, ಬಿಜ್ಜಳನ ವಧೆ, ಶರಣರು ಉಳಿವಿಗೆ ಪ್ರಯಾಣ ಬೆಳೆಸಿದುದು, ಸಂಗಮನಲ್ಲಿ ಬಸವಣ್ಣನವರ ಐಕ್ಯ – ಇತ್ಯಾದಿ ವಿಷಯಗಳು ವರ್ಣಿತವಾಗಿವೆ”.[3] ಎಂದಿದ್ದಾರೆ.

ಬಸವಣ್ಣನವರ ಜೀವನ ಚರಿತ್ರೆಯನ್ನು ವಿವರಿಸುವ ಮತ್ತೊಂದು ಮಹತ್ವದ ಕಾದಂಬರಿ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ರಚಿಸಿದ 'ಕರ್ತಾರನ ಕಮ್ಮಟ'

ಕಾದಂಬರಿಯಾಗಿದೆ. ಹತ್ತು ಅಧ್ಯಾಯಗಳಿಂದ ಕೂಡಿದ 910 ಪುಟಗಳ ಬೃಹತ್ ಕಾದಂಬರಿಯಾಗಿದೆ. ಈ ಕಾದಂಬರಿಯು ಕನ್ನಡ ಕಾದಂಬರಿ ಕ್ಷೇತ್ರದಲ್ಲಿಯೇ ಒಂದು ಮೈಲುಗಲ್ಲು. ಕನ್ನಡ ಸಾರಸ್ವತ ಪ್ರಪಂಚಕ್ಕೆ ಅಮೋಘ ಕೊಡುಗೆಯಾಗಿದೆ. ಈ ಕಾದಂಬರಿಯಲ್ಲಿ ದಿಗಂತದಲ್ಲಿ ದೀಪಾಂಕುರ, ಬೆಳೆವಕುಡಿ ಕ್ರಾಂತಿಕಿಡಿ, ಕೂಡಲ ಸಂಗಮದೇವ, ಭಂಡಾರಿ, ಭಕ್ತ ಭಂಡಾರಿ, ಮಂಗಳದ ಮುಂಬೆಳಗು, ಸರ್ವರಿಗೂ ಸುಮಬಾಳು, ಚುಂಬಕಗಾಳಿ, ಕಲ್ಯಾಣವೆಂಬ ಪ್ರಣತೆಯಲ್ಲಿ, ಸಿಡಿಮದ್ದಿನ ಕಿಡಿ, ಕ್ರಾಂತದರ್ಶಿ ಎಂಬ ಹತ್ತು ಅಧ್ಯಾಯಗಳಲ್ಲಿ ಬಸವಣ್ಣನವರ ಜೀವನ ಚರಿತ್ರೆಯನ್ನು ವಿವರಿಸುತ್ತದೆ. ಈ ಕಾದಂಬರಿಯಲ್ಲಿ ಬಸವಣ್ಣನವರನ್ನು ಕುರಿತು ಅಧ್ಯಯನ ಮತ್ತು ಅವರ ಸ್ವತಂತ್ರ ವಿಚಾರಶೀಲತೆಯ ವಿವೇಚನೆಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಅವರ ಮಾನವೀಯತೆಯ ವಿಕಾಸದ ಮಹತ್ಸಾಧನೆಯನ್ನು ವೈಚಾರಿಕ ಹಿನ್ನಲೆಯಲ್ಲಿ ಚಿತ್ರಿಸಿರುವುದು ಈ ಕಾದಂಬರಿಯ ವೈಶಿಷ್ಟ್ಯವಾಗಿದೆ. ಲೇಖಕರಾದ ಎಚ್. ತಿಪ್ಪೇರುದ್ರಸ್ವಾಮಿಯವರ ಸೃಜನಶೀಲತೆ, ಚಿಂತನಪರತೆ, ಅನುಭಾವ ದೃಷ್ಟಿ, ದಾರ್ಶನಿಕ ದೃಷ್ಟಿಗೆ ಒಂದು ಅತ್ಯುತ್ತಮ ನಿದರ್ಶನವಾಗಿದೆ ಈ ಕಾದಂಬರಿ.

ಬಸವಣ್ಣನವರ ಜೀವನ ಚರಿತ್ರೆಯನ್ನು ಚಿತ್ರಿಸುವ ಬಹಳ ಜನಪ್ರಿಯತೆಯನ್ನು ಹೊಂದಿರುವ ಕಾದಂಬರಿಗಳಲ್ಲಿ ಜಿ. ಎಚ್. ಹನ್ನೆರಡುಮಠ ಅವರು ಬಸವ ಪರಿಸರವನ್ನು ಕುರಿತು ರಚಿಸಿದ ಎಂಟು ಕಾದಂಬರಿಗಳಾಗಿವೆ. ಅವುಗಳೆಂದರೆ 'ಕೂಗಿತ್ತು ಕೂಡಲ ಸಂಗಮ', 'ಯೋಗಿ ಕಂಡ ಯೌವನ', 'ಗುರುವೆಂದಾರೆ ಯಾರೊ ಹರನೆಂದಾರೆ ಯಾರೊ', 'ಯೋಗಿಗೆ ಯೋಗಿಣಿಯಾಗಿ ಕಾಡಿತ್ತು', 'ಬೃಂಗ ಬಂದಾವೋ ಲಿಂಗ ತುಂಬ್ಯಾವೋ', 'ಕಲ್ಯಾಣ ಕೂಗೈತೊ', 'ತೇರು ಸಾಗಿತಣ್ಣ ಬಸವನ ಪಾಜ ಬಂದಿತ್ತಣ್ಣ', 'ಉಳವಿಯಲ್ಲಿ ಓಂಕಾರ', ಎಂಬ ಎಂಟು ಕಾದಂಬರಿಗಳನ್ನು ರಚಿಸಿದ್ದು ಸುಮಾರು 2000 ಪುಟಗಳಷ್ಟು ವ್ಯಾಪ್ತಿಯನ್ನು ಹೊಂದಿವೆ. ಜಿ. ಎಚ್. ಹನ್ನೆರಡುಮಠರವರ ಈ ಕಾದಂಬರಿಗಳು ಬಸವಣ್ಣನವರ ಜೀವನ ಚರಿತ್ರೆಯನ್ನು ಕಟ್ಟಿಕೊಡುವುದರ ಜೊತೆಗೆ ಆ ಕಾಲಘಟ್ಟದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಪರಿಸರವನ್ನು ತುಂಬಾ ಆಳವಾದ ಅಧ್ಯಯನದ ಮೂಲಕ ಸವಿಸ್ತಾರವಾಗಿ ತಿಳಿಸಿಕೊಟ್ಟಿರುವುದು ಈ ಕಾದಂಬರಿಗಳ ವೈಶಿಷ್ಟ್ಯವಾಗಿದೆ.

ಬಸವಣ್ಣವರ ಜೀವನ ಚರಿತ್ರೆಯ ವಿವರಗಳನ್ನು ಐತಿಹಾಸಿಕ ದೃಷ್ಟಿಕೋನದಿಂದ ಕಟ್ಟಿಕೊಟ್ಟ ಮತ್ತೊಂದು ಮಹತ್ವದ ಕಾದಂಬರಿ ಎಂದರೆ ಶ್ರೀ ಲಕ್ಕಪ್ಪ ಅ. ಶಿರಹಟ್ಟಿಯವರು ರಚಿಸಿದ 'ಬಸವರಾಜದೇವರು', ಕಾದಂಬರಿಯಾಗಿದೆ. ''ಈ ಕಾದಂಬರಿಯಲ್ಲಿ ಶ್ರೀ ಬಿ.ಪುಟ್ಟಸ್ವಾಮಯ್ಯನವರು ಬರೆದ ಆರು ಕಾದಂಬರಿಗಳಲ್ಲಿಯ ಕಥೆಯ ಛಾಯೆಯನ್ನು ಇದರಲ್ಲಿ ಕಾಣಬಹುದು. ಬಹುಸಂಖ್ಯಾತರಾದ ಸಾಮಾನ್ಯ ಜನರು ಸುಲಭದಲ್ಲಿ ಓದಿ ಬಸವಣ್ಣನವರ ಜೀವನವನ್ನು ಅರಿತುಕೊಳ್ಳಬೇಕೆಂಬ

ಉದ್ದೇಶದಿಂದ ಈ ಗ್ರಂಥ ರಚನೆಯಾದಂತೆ ಕಾಣುತ್ತದೆ".[4] ಎಂದಿದ್ದಾರೆ.

ಬಸವಣ್ಣನವರ ಜೀವನ ಮತ್ತು ಸಂದೇಶಗಳನ್ನು ಚಿತ್ರಿಸುವ ಮತ್ತೊಂದು ಐತಿಹಾಸಿಕ ಕಾದಂಬರಿ ಎಂದರೆ ಶಾಂತಾದೇವಿ ಮಾಳವಾಡರು ರಚಿಸಿದ 'ಬಸವ ಪ್ರಕಾಶ' ಕಾದಂಬರಿಯಾಗಿದೆ. ಹತ್ತೊಂಭತ್ತು ಅಧ್ಯಾಯಗಳಲ್ಲಿ 236 ಪುಟಗಳ ವ್ಯಾಪ್ತಿಯಲ್ಲಿ ಕಾದಂಬರಿ ರಚನೆಯಾಗಿದೆ. ಬಸವಣ್ಣನವರನ್ನು ಕುರಿತು ಶಿವಶರಣರು ರಚಿಸಿದ ವಚನಗಳು, ಕಾವ್ಯಗಳಲ್ಲಿ ನಿರೂಪಿತವಾದ ಪವಾಡ ಪುರುಷ ಬಸವಣ್ಣನವರ ಜೀವನ ಹಾಗೂ ನನ್ನ ಕಲ್ಪನೆ ಸೇರಿ ಬಸವ ಪ್ರಕಾಶ ಕಾದಂಬರಿಯನ್ನು ರಚಿಸಲಾಗಿದೆ.

ಬಸವಣ್ಣನವರ ಜೀವನ ಚರಿತ್ರೆಯ ವಿವರಗಳನ್ನು ಚಿತ್ರಿಸುವ ಮತ್ತೊಂದು ಕಾದಂಬರಿ ಶ್ರೀ ಮಂಗಾಪುರಮಠ ಚಂದ್ರಶೇಖರಶಾಸ್ತ್ರಿ ಅವರು ರಚಿಸಿದ ಕಾದಂಬರಿ 'ಶಿವಶರಣ ಸಾಮ್ರಾಟ್ ಬಸವಣ್ಣ' ಕಾದಂಬರಿಯಾಗಿದೆ. ಈ ಕಾದಂಬರಿಯು 1959 ರಲ್ಲಿ ಶ್ರೀ ಸಿ. ಎಚ್. ಅನ್ನದಾನೇಶ್ವರ ಹಿರೇಮಠ, ನಾರದಗಡ್ಡೆ ರಾಯಚೂರು ಇವರ ಪ್ರಕಾಶನದಲ್ಲಿ ಪ್ರಥಮ ಬಾರಿಗೆ ಮುದ್ರಣಗೊಂಡಿದೆ. ಇದರಲ್ಲಿ 'ಬಸವಣ್ಣನವರ ಜನನ', 'ಪವಾಡ ಪುರುಷ ಬಸವಣ್ಣ', 'ಸಮರ್ಥ ರಾಜಕಾರಣಿ ಬಸವಣ್ಣ', 'ತತ್ವಜ್ಞಾನಿ ಬಸವಣ್ಣ', 'ವಚನಕಾರ ಬಸವಣ್ಣ', ಇತ್ಯಾದಿ ಅಧ್ಯಾಯಗಳಲ್ಲಿ ಬಸವಣ್ಣನವರ ವ್ಯಕ್ತಿತ್ವದ ಹಿರಿಮೆಯನ್ನು ವರ್ಣಿಸಲಾಗಿದೆ. ಬಸವಣ್ಣನವರ ಕುರಿತು ಬರೆದ ಕೆಲವು ಪದ್ಯಗಳು ಕೊನೆಯಲ್ಲಿವೆ.

ಬಸವಣ್ಣನವರನ್ನು ಕುರಿತು ಕನ್ನಡದಲ್ಲಿ ರಚನೆಯಾಗಿರುವ ಎಲ್ಲ ಕಾದಂಬರಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲು ಹೋಗಿಲ್ಲ. ಕೇವಲ ಹೆಚ್ಚು ಜನ ಓದುಗರ ಗಮನ ಸೆಳೆದಿರುವ ಕೆಲವೇ ಕಾದಂಬರಿಗಳನ್ನು ಮಾತ್ರ ಎತ್ತಿಕೊಂಡು ಅಲ್ಲಿ ಮೂಡಿಬಂದಿರುವ ಬಸವಣ್ಣನವರ ಬಹುಮುಖ ವ್ಯಕ್ತಿತ್ವದ ಸ್ಥೂಲ ಚಿತ್ರಣವನ್ನು ಈ ಲೇಖನದಲ್ಲಿ ಪ್ರಸ್ತಾಪಿಸಿದ್ದಾನೆ. ಪ್ರತಿಯೊಂದು ಕೃತಿಯನ್ನು ಎಳೆ ಎಳೆಯಾಗಿ ಬಿಡಿಸುತ್ತಾ ಹೋದರೆ ಪ್ರತಿಯೊಂದು ಕೃತಿಯೂ ಒಂದೊಂದು ಲೇಖನವೇ ಆದೀತು ಎಂಬ ವಿಚಾರದಿಂದ ಕೆಲವೇ ಕೃತಿಗಳನ್ನು ಆಯ್ದುಕೊಂಡು, ಅಲ್ಲಿ ಚಿತ್ರಿತಗೊಂಡಿರುವ ಬಸವಣ್ಣನವರ ವ್ಯಕ್ತಿತ್ವ ಹಾಗೂ ಕಾರ್ಯಸಾಧನೆಯ ವಿವರಗಳನ್ನು ಕೊಡಲು ಪ್ರಯತ್ನಿಸಿದ್ದೇನೆ.

**ಕೊನೆ ಟಿಪ್ಪಣಿಗಳು:**

1. ಸಿದ್ಧಯ್ಯ ಪುರಾಣಿಕ, ಬಸವಣ್ಣನವರ ಜೀವನ ಮತ್ತು ಸಂದೇಶ, ಪು.ಸಂ. 6
2. ಗುಂಜಾಳ ಎಸ್.ಆರ್., (1967), ಬಸವ ಸಾಹಿತ್ಯ ದರ್ಪಣ, ಬಸವ ಸಮಿತಿ, ಬೆಂಗಳೂರು, ಪು.ಸಂ. 45
3. ಅದೇ, ಪು.ಸಂ. 23
4. ಅದೇ, ಪು.ಸಂ. 384

**ಪರಾಮರ್ಶನ ಗ್ರಂಥಗಳು:**


1. ಪುಟ್ಟಸ್ವಾಮಯ್ಯನವರ ಬಿ., (2013), ಉದಯರವಿ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
2. ಪುಟ್ಟಸ್ವಾಮಯ್ಯನವರ ಬಿ., (2013), ರಾಜ್ಯಪಾಲ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
3. ಪುಟ್ಟಸ್ವಾಮಯ್ಯನವರ ಬಿ., (2013), ಕಲ್ಯಾಣೇಶ್ವರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
4. ಪುಟ್ಟಸ್ವಾಮಯ್ಯನವರ ಬಿ., (2013), ನಾಗಬಂಧ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
5. ಪುಟ್ಟಸ್ವಾಮಯ್ಯನವರ ಬಿ., (2013), ಮುಗಿಯದ ಕನಸು, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
6. ಪುಟ್ಟಸ್ವಾಮಯ್ಯನವರ ಬಿ., (2013), ಕ್ರಾಂತಿ ಕಲ್ಯಾಣ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
7. ತಿಪ್ಪೇರುದ್ರಸ್ವಾಮಿಯವರ ಎಚ್., (2000), ಕರ್ತಾರನ ಕಮ್ಮಟ, ಸಿದ್ಧಗಂಗಾ ಪ್ರಕಾಶನ, ತುಮಕೂರು.
8. ಶಾಂತಾದೇವಿ ಮಾಳವಾಡ, (2013), ಬಸವ ಪ್ರಕಾಶ, ಸುರುಚಿ ಪ್ರಕಾಶನ, ಮೈಸೂರು.
9. ಚಂದ್ರಶೇಖರ ಶಾಸ್ತ್ರಿ, (1979), ಶಿವಶರಣ ಸಾಮ್ರಾಟ್ ಬಸವಣ್ಣ, ಶಿವಕಾಶಿ ಪ್ರಕಾಶನ, ಬೆಂಗಳೂರು.
10. ಚಿದಾನಂದಪ್ಪ ಎಂ.ಆರ್., (2020), ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಸವಣ್ಣ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.
11. ಗುಂಜಾಳ ಎಸ್.ಆರ್., (1967), ಬಸವ ಸಾಹಿತ್ಯ ದರ್ಪಣ, ಬಸವ ಸಮಿತಿ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.